ದಿಃ26-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಿ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ** 3 ನೇ ಎದುರುದಾರರ ಪರವಾಗಿ ಶ್ರೀ. ಜಿ.ವಿ.ಬಿ ವಕೀಲರಿಂದ.

ನಾನು ನಡೆಸುತ್ತಿರುವ ಫರ್ಮನ ಹೆಸರು ಆದಿತ್ಯ ಅಸೋಸಿಯೇಟ್ಸ ಎಂದು ಇರುತ್ತದೆ. ನಮ್ಮ ಫರ್ಮ ನೋಂದಣಿಯಾಗಿರುತ್ತದೆ . ನಮ್ಮ ಫರ್ಮ ನೋಂದಣಿಯಾದ ಬಗ್ಗೆ ನ್ಯಾಯಾಲಯದ ಮುಂದೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಕೇಳಿದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ . ನಮ್ಮ ಫರ್ಮ ಮತ್ತು 1 ನೇ ಎದುರುದಾರರ ಮಧ್ಯ ಗುತ್ತಿಗೆ ಕಾರ್ಮಿಕನ್ನು ಒದಗಿಸುವ ಕುರಿತು ಒಪ್ಪಂದ ಪತ್ರ ಆಗಿರುತ್ತದೆ. ಸದರಿ ಒಪ್ಪಂದ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಕೇಳಿದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಫರ್ಮ ನೋಂದಣಿಯಾದ ಬಗ್ಗೆ ಮತ್ತು 1 ನೇ ಎದುರುದಾರರೊಂದಿಗೆ ಗುತ್ತಿಗೆ ಕಾರ್ಮಿಕರನ್ನು ಒದಗಿಸುವ ಕುರಿತು ಒಪ್ಪಂದ ಪತ್ರ ಆದ ಬಗ್ಗೆ ತೋರಿಸಲು ನನ್ನ ಹತ್ತಿರ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಆರ್-1 ರಲ್ಲಿ ಇರುವ ಸಹಿ ನನ್ನದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಸಹೋದರನದ್ದು ಇರುತ್ತದೆ ಎಂದು ನುಡಿಯುತ್ತಾರೆ. ಮೃತ ಶ್ರೀ ಬಸ್ತ್ಯಾಯಾನ ಇನಾಸ ಡಿಸೋಜಾ ಇವರು ಮೃತ ಪಟ್ಟ ಅಂದರೆ 2021 ರ ಮೇ ತಿಂಗಳಲ್ಲಿ ನಾನು 1 ನೇ ಎದುರುದಾರರ ಹತ್ತಿರ ಒಟ್ಟು 30-40 ಗುತ್ತಿಗೆ ಕಾರ್ಮಿಕರನ್ನು ಕೆಲಸಕ್ಕೆ ಕಳುಹಿಸಿರುತ್ತೇನೆ . ನಿಆರ್ 6 ಪ್ರಕಾರ ಕೇವಲ 7 ಜನಕ್ಕೆ ಪಾಲಿಸಿ ಮಾಡಿಸಲಾಗಿರುತ್ತದೆ ಎಂದರೆ ಸರಿ . ಸಾಕ್ಷಿಯು ಮುಂದುರೆದು ಉಳಿದ ವ್ಯಕ್ತಿಗಳ ಕುರಿತು ಮಾಡಿದ ಪಾಲಿಸಿ ಬೇರೆ ಇರುತ್ತವೆ ಎಂದು ನುಡಿಯುತ್ತಾರೆ. ಮೃತ ಶ್ರೀ ಬಸ್ತ್ಯಾಯಾನ ಇನಾಸ ಡಿಸೋಜಾ ಇವರಿಗೆ ದಿನಕ್ಕೆ 419/- ರೂ ಸಂಬಳ ಕೊಡುತ್ತಿದ್ದೇನು. ನಾನು ಯಾವುದೇ ಕಾಲಕ್ಕೂ ಆದಿತ್ಯ ಅಸೋಸಿಯೇಟ್ ನ ಪ್ರೋಪ್ರೈಟರಾಗಿ ಕಾರ್ಯನಿರ್ವಹಿಸಿರುವುದಿಲ್ಲ ಎಂದರೆ

ಸರಿಯಲ್ಲ. ಮೃತ ಶ್ರೀ ಬಸ್ತ್ಯಾಯಾನ ಇನಾಸ ಡಿಸೋಜಾ ಇವರು ನನ್ನ ಹತ್ತಿರ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ . ಸದರಿಯವರನ್ನು ನಾನು 1 ನೇ ಎದುರುದಾರರ ಹತ್ತಿರ ಗುತ್ತಿಗೆ ಕಾರ್ಮಿಕನಾಗಿ ಯಾವತ್ತು ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ . ಘಟನೆಯಾದ ಕುರಿತು ನಾನು ಕಾರ್ಮಿಕ ಇಲಾಖೆಗೆ ವರದಿಯನ್ನು ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು 1 ನೇ ಎದುರುದಾರರೇ ವರದಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಎದುರುದಾರರು ಮೃತ ಶ್ರೀ ಬಸ್ತ್ಯಾಯಾನ ಇನಾಸ ಡಿಸೋಜಾ ಇವರ ಕುಟುಂಬಕ್ಕೆ ತಕ್ಷಣ ಪರಿಹಾರ ಎಂದು ಹಣ ನೀಡಿರುತ್ತಾರೋ ಇಲ್ಲಮೋ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ . ಮೃತ ಶ್ರೀ ಬಸ್ತ್ಯಾಯಾನ ಇನಾಸ ಡಿಸೋಜಾ ಇವರ ಮರಣವು ಉದ್ಯೋಗದ ಸಮಯದಲ್ಲಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಶ್ರೀ ಬಸ್ತ್ಯಾಯಾನ ಇನಾಸ ಡಿಸೋಜಾ ಇವರು 1 ನೇ ಎದುರುದಾರರ ಕಾರ್ಖಾನೆಯ ಆವರಣದಲ್ಲಿ ಮೃತ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿಯನ್ನು ನಾನು ನನ್ನ ಮತ್ತು 1 ನೇ ಎದುರುದಾರರ ಪರವಾಗಿ ನೀಡಿರುತ್ತೇನೆ. ನನಗೆ ಮೃತ ಶ್ರೀ ಬಸ್ತ್ಯಾಯಾನ ಇನಾಸ ಡಿಸೋಜಾ ಇವರ ಪರಿಚಯ ಇಲ್ಲದೇ ಇದ್ದರೂ ಸಹ ಆತ ನನ್ನ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** – ಇಲ್ಲ –

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).

ಓ.ಹೇ.ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ. ಹಳಿಯಾಳ.